ಇಂಟ್ರೂಷನ್ ಅನ್ನಿಸಿತ್ತು..." ಅಖ್ತರನ ಮಾತು ಮತ್ತು ತರ್ಕ ಅನಿರುದ್ಧನಿಗೆ ಸರಿತೋರಲಿಲ್ಲ. ಆ ಬಗ್ಗೆ ಕವಿತಾಳ ಜೊತೆ ಮಾತನಾಡಬೇಕೆಂದು ಮನಸ್ಸಿನಲ್ಲೇ ಟಿಪ್ಪಣಿ ಹಾಕಿಕೊಂಡ. ತನ್ನ ಚಟುವಟಿಕೆಗಳನ್ನು ಗುಪ್ತವಾಗಿ ಇಡುವುದಕ್ಕೆ – ತನ್ನ ಗೆಳೆಯರ ತಂಡವನ್ನು ತೋರದಿರುವುದಕ್ಕೆ ಮತ್ತು ಮಾಹಿತಿಯ ಖಾಸಗೀತನವನ್ನು ಕಾಪಾಡಿಕೊಳ್ಳುವುದಕ್ಕೆ ಬಲವಾದ ಕಾರಣ ಕಾಣಲಿಲ್ಲ. ಅಖ್ತರ ಕೊಟ್ಟ ವಿವರಣೆ ಕೇವಲ ಒಂದು ಕುಂಟುನೆಪ ಎಂದು ಅನಿರುದ್ಧನಿಗೆ ಅನ್ನಿಸಿತ್ತು. ಈ ಹಿನ್ನೆಲೆಯಲ್ಲಿ ವಾಟ್ಸ್‌ಆ್ಯಪ್ ಕಾಲ್ ಸೆಕ್ಯೂರಾಗಿರುತ್ತೆ ಎನ್ನುವ ಮಾತೂ, ಅವನ ಇ–ಮೇಲ್ ವಿಳಾಸ ಜಿ–ಮೇಲಿನಿಂದ ಬೇರೊಂದು ಸೆಕ್ಯೂರ್ ಮೇಲ್‌ಗೆ ಬದಲಾಗಿದ್ದನ್ನು ಅನಿರುದ್ಧ ಗಮನಿಸಿದ್ದ.

"ನಿನ್ನ ಹತ್ತಿರ ನಾನು ಇನ್ನೊಂದು ವಿಷಯ ಕೇಳಬೇಕು" ಅಖ್ತರ ಹೇಳಿದ: "ಈಗ ನಾನು ಸುಜಾತಾಳಿಗೆ ಫೋನ್ ಮಾಡಬಹುದು ಅಲ್ಲವೇ... ಮಾತಾಡೋದಕ್ಕೆ ಇದು ಸರಿಯಾದ ಸಮಯವೇ, ಮತ್ತು ನಾನೇನಾದರೂ ಭಾರತಕ್ಕೆ ಬರಬೇಕೇ... ಬರುವುದರಿಂದ ನಿಮಗೇನಾದರೂ ಸಮಾಧಾನವಾಗಬಹುದೇ... ನನಗೆ ಗೊತ್ತು ನನ್ನಿಂದ ಯಾವುದೇ ಹೆಚ್ಚಿನ ಉಪಯೋಗವಿಲ್ಲ... ನಾನೇ ಹೊರಗಿನವ, ಆದರೆ, ಒಂದು ಡೈವರ್ಷನ್ ಆಗುವುದಾದರೆ, ಬೇರೆ ಕಡೆಗೆ ಗಮನ ಹರಿಯುವುದಾದರೆ ನಾನು ಬರುವುದಕ್ಕೆ ಸಿದ್ಧ."

ಈ ಮಾತಿಗೆ ಅನಿರುದ್ಧ ಖಂಡಿತವಾಗಿ ಹೇಳಿದ: "ನೋನೋ... ನೀನು ಬರುವುದು ಖಂಡಿತವಾಗೂ ಬೇಡ... ಸುಮ್ಮನೆ ದುಡ್ಡು ಖರ್ಚು... ಷಿ ಇಸ್ ಮ್ಯಾನೇಜಿಂಗ್... ಅವಳಿಗೊಂದು ಕಾಲ್ ಮಾಡಿ ಮಾತನಾಡು. ಸಾಕು."

★★★

ಅನಿರುದ್ಧನ ವಿಷಯದಲ್ಲಿ ಅಖ್ತರಿನಿಗೊಂದು ಪದ್ಧತಿ ಕಾಣತೊಡಗಿತ್ತು. ಪ್ರತಿಬಾರಿಯೂ ಬೆಚ್ಚಗೆ ಮಾತು ಪ್ರಾರಂಭಿಸಿ, ತಮ್ಮ ಕಾಲೇಜಿನ ದಿನಗಳ ಅನಿರುದ್ಧನಂತೆ ಕಾಣುತ್ತಿದ್ದವನು, ಮಾತು ಮುಗಿಯುವ ವೇಳೆಗೆ ತನ್ನ ದನಿಯನ್ನು ಬದಲಾಯಿಸಿಬಿಡುತ್ತಿದ್ದ. ಅವನ ಜೊತೆ ಬೆಂಗಳೂರಿನಲ್ಲಿ ಇಳಿದುಕೊಂಡಿದ್ದಾಗಲೂ, ಎರಡೂ ಬಾರಿಯೂ ಹಾಗೇ ಆಗಿತ್ತು. ಹೋದ ಮೊದಲ ದಿನಗಳಲ್ಲಿ ಉತ್ಸಾಹದಿಂದ ಇರುತ್ತಿದ್ದವನು ಅಲ್ಲಿಂದ ನೈರೋಬಿಯತ್ತ ಪ್ರಯಾಣ ಬೆಳೆಸುವ ವೇಳೆಗೆ ಅಖ್ತರನ ವಿಷಯದಲ್ಲಿ ತಣ್ಣಗಾಗುತ್ತಿದ್ದ. ಈಗ ಫೋನ್ ಮಾಡಿದಾಗಲೂ ಹಾಗೇ, ಮೊದಲಿಗೆ ಉತ್ಸಾಹದಿಂದ ಮಾತನಾಡಿದವನು ಇಡುವ ವೇಳೆಗೆ ವ್ಯಾವಹಾರಿಕವಾಗಿಬಿಟ್ಟಿದ್ದ. ಭಾರತಕ್ಕೆ ಹೋಗುವುದರಲ್ಲಿ ಅರ್ಥವಿಲ್ಲ ಎಂದು ಅನಿರುದ್ಧ ಹೇಳಿದ್ದನ್ನು ಅಖ್ತರ್ ಒಪ್ಪಿದ. ನಿಜಕ್ಕೂ ಅವನಿಗೆ ಮತ್ತೊಮ್ಮೆ ಪ್ರಯಾಣ ಮಾಡಿ ಕೆಲಸವಿಲ್ಲದ ಪ್ರೊಫೈಲಿಂಗ್ ಮತ್ತು ವಿಚಾರಣೆಗೊಳಗಾಗುವುದು ಇಷ್ಟವೇ ಇರಲಿಲ್ಲ.

ಆದರೆ ಈಗ ಅಖ್ತರ್ ಸುಜಾತಾಳ ಜೊತೆ ಹೇಗೆ ಮತ್ತು ಏನು ಮಾತಾಡುವುದು ಎಂದು ತಿಳಿಯದೇ ಗೊಂದಲಕ್ಕೀಡಾದ. ನಾಲ್ಕೇ ತಿಂಗಳ ಹಿಂದೆ ಅವರು ಇದ್ದ ಪರಿಸ್ಥಿತಿಯೇ ಬೇರೆ – ಈಗ ಇರುವ ಪರಿಸ್ಥಿತಿಯೇ ಬೇರೆ. ಈ ನಡುವೆ ಎಷ್ಟೆಲ್ಲಾ ಉಪಕಥೆಗಳು ಬಂದು ಹೋಗಿವೆ. ಮುಕುಂದಸಾಗರ ಪ್ರಾಣ ಕಳೆದುಕೊಂಡ. ಅದು ಸಹಜರೀತಿಯಲ್ಲಿ ಅಲ್ಲ. ಅದೊಂದು ಆತ್ಮಹತ್ಯೆಯೋ ಪಿತೂರಿಯೋ ಎನ್ನುವ ವಿಚಾರಣೆ ನಡೆಯುತ್ತಿದೆ. ಸುಜಾತಾ ಮತ್ತು ಮುಕುಂದಸಾಗರ ನಡೆಸುತ್ತಿದ್ದ ಪಾಲುದಾರಿಕೆಯ ವ್ಯಾಪಾರ ಯಾರದೋ ಕೈವಶವಾಗಿದೆ. ಪತ್ರಿಕೆ ಮತ್ತು ಟೀವಿ ಚಾನಲ್ಲುಗಳು ಅವನ ಸಾವಿಗೂ ಈ ವ್ಯಾಪಾರದ ಹಸ್ತಾಂತರಕ್ಕೂ ಕೊಂಡಿ ಹಾಕಿ ಅಲ್ಲೇನಾದರೂ ಪಿತೂರಿಯಿರಬಹುದೆಂದು ಹೇಳುತ್ತಿದ್ದಾರೆ. ಇದನ್ನೆಲ್ಲ ಬಿಟ್ಟುಕೊಟ್ಟು ವ್ಯಾಪಾರದಿಂದ ದೂರ ಉಳಿಯಬೇಕೋ ಅಥವಾ ಹೋರಾಡಬೇಕೋ ಎನ್ನುವ ವಿಷಯ ತಿಳಿಯದೇ ಸುಜಾತಾ ಹೈರಾಣಾಗಿರುವಂತಿದೆ. ನಮ್ಮ ದಾರಿಯನ್ನು ಕ್ರಮಿಸುತ್ತಾ, ಗೆಳೆತನವನ್ನು ನಿಭಾಯಿಸುತ್ತಾ ಇದ್ದ ನಮ್ಮಲ್ಲೇ ಎಷ್ಟೊಂದು